ನಗೆ ಎಪ್ರಿಲ್

ನವನವೀನ 1ರ ವಿಶೇಷ



# ಆಧುನಿಕ ರಕ್ಕಸರು

■ ಗುಂಡುರಾವ್ ದೇಸಾಯಿ, ಮಸ್ಕಿ

ಮಕ್ಕಳು ಹೀಗೇಕೆ ಹೊಸ ಬಗೆಯ ಉತ್ಪನ್ನಗಳ ಮೊರೆಹೋಗುತ್ತಿವೆ. ಪಿಜ್ಜಾ, ಬರ್ಗರ್, ಕುರುಕುರೆ, ಗೋಬಿ, ನೂಡಲ್ಸ್, ಚಾಟ್ಸ್, ಚಾಕೊಲೇಟ್ ಮೊದಲಾದ ಜಂಕ್‌ಫುಡ್‌ಗಳು, ಬೇಕರಿ ಐಟಮ್ಸ್‌ಗಳು ಮಕ್ಕಳು ದೊಡ್ಡವರಾದಿಯಾಗಿ ಎಲ್ಲರನ್ನೂ ಮರುಳುಮಾಡುತ್ತಿವೆ. ಎಲ್ಲರೂ ಟಿ.ವಿ, ಮೊಬೈಲ್, ಇಂಟರ್ನೆಟ್ ದಾಸರಾಗುತ್ತಿದ್ದಾರೆ, ಬುದ್ಧಿಯನ್ನು ಮಂದ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೇನು ಕಾರಣ? ಪತ್ತೆ ಹಚ್ಚಲೇ ಬೇಕು ಅಂತ ಡಿ.ಎನ್.ಎ. ಸ್ಪೆಷಲಿಸ್ಟ್ ಪದ್ದು ದೀಪ್ರ ಸಂಶೋಧನೆಯಲ್ಲಿ ತೊಡಗಿದ.

ಎಂತೆಂತಹದೋ ವ್ಯಾಧಿಗಳಿಗೆ ಔಷಧಿ ಕಂಡುಹಿಡಿದಿದ್ದ ಪದ್ದು ಜಂಕ್‌ಫುಡ್‌ನ ಸಹವಾಸದಿಂದ ಡಿಎನ್‌ಎ ರಚನಾ ಕ್ರಮವೇ ಬದಲಾಗುತ್ತಿರುವುದನ್ನು ಗಮನಿಸಿ ಅಚ್ಚರಿಗೊಂಡ. ಅಲ್ಲಿ ವಂಶವಾಹಿನಿಯಲ್ಲದ ಹೊಸಬಗೆ ವರ್ಣತಂತು ಬಂದು ಸೇರುತ್ತಿರುವುದನ್ನು ಕಂಡು ದಂಗಾದ. ತಾನು ಕಂಡುಕೊಂಡಿದ್ದನ್ನು ಸಂಶೋಧಕ ಮಿತ್ರರ ಜೊತೆಗೆಲ್ಲ ಹಂಚಿಕೊಂಡ.

ಪದ್ದು ವೈಚಾರಿಕ ಚಿಂತಕ. ಮನಸ್ಸಿನ ಒತ್ತಡ ದುಗುಡವನ್ನು ಕಡಿಮೆ ಮಾಡಿಕೊಳ್ಳಲು ಅಧ್ಯಾತ್ಮದ ಬಗ್ಗೆ ಒಲವಿದ್ದ ವಿಜ್ಞಾನಿ. ಸಮಸ್ಯೆಗೆ ಕಾರಣ ಹುಡುಕುತ್ತಾ ಮಲಗಿದ. ತಕ್ಷಣ ದೇವರು ಪ್ರತ್ಯಕ್ಷನಾದ.

‘ಯಾರು?’ ಎಂದು ಪದ್ದು ಎದ್ದು ಲೈಟ್ ಹಾಕಿದ.

‘ನಾನು... ನಾರಾಯಣ... ಲೋಕಪಾಲಕ.’

ಹೌಹಾರಿದ ಪದ್ದು, ‘ಯಾರು ನೀನು... ನಿಜ ಹೇಳು? ಏನಾಗಬೇಕಿತ್ತು?’ ಎಂದ.

ದೇವರು ನಕ್ಕ. ‘ನಾನೇ ನಾರಾಯಣಪ್ಪ... ವಿಜ್ಞಾನಿಯಾಗಿ ಹೆದರುವುದೇ? ವೈಕುಂಠದಿಂದ ಬಂದಿರುವೆ.’

‘ವಾಟ್..! ವೈಕುಂಠ... ಈ ವಿಜ್ಞಾನ ಯುಗದಲ್ಲಿ ನಂಬಬಹುದೆ? ಅದು ವಿಜ್ಞಾನಿಯಾಗಿ.’

‘ನೀನು ಸಂಸ್ಕಾರ ಪುರುಷ, ಹಾಗಾಗಿ ದರ್ಶನ ನೀಡಿರುವೆ. ವಿಜ್ಞಾನ ಒಂದು ಜ್ಞಾನದ ಶಾಖೆಯೇ ಹೊರತು ಪ್ರಕೃತಿಗೆ ಮೀರಿದ್ದಲ್ಲ. ಪ್ರಕೃತಿಯ ರಹಸ್ಯ ನಮ್ಮಲ್ಲಿ ಅಡಗಿದೆ. ಅದನ್ನು ನಿಮಗೆ ತಿಳಿಯಲು ಸಾಧ್ಯವಿಲ್ಲ’ ಎಂದ ನಾರಾಯಣ.

‘ಬಿಗ್ ಬ್ಯಾಂಗ್ ಪ್ರಯೋಗ ನಡೆದಿದೆ. ನಿಮ್ಮ ರಹಸ್ಯವೆಲ್ಲ ತಿಳಿಯುತ್ತದೆ.’

‘ಇಲ್ಲ ವತ್ಸ. ಅದಷ್ಟು ಸುಲಭವಲ್ಲ. ಪ್ರಕೃತಿಯ ವಿರುದ್ಧ ಈಜಿದಷ್ಟೂ ನಿಮಗೇ ತೊಂದರೆ. ಈಗ ನೋಡುತ್ತಿರುವಿರಿ ತಾನೆ, ತಾಪಮಾನದ ಏರಿಕೆ, ಅದರಿಂದಾಗುತ್ತಿರುವ ಅನಾಹುತ...’

‘ನಿಜ... ಆದರೂ...?’

‘ಅದರ ಬಗ್ಗೆ ಮಾತು ಬೇಡ. ಯಾವುದೋ ವಿಷಯದ ಬಗ್ಗೆ ನೀನು ಚಿಂತಿಸುವಂತಿತ್ತು. ಅದಕ್ಕಾಗಿ ಬಂದೆ.’

‘ತಮಗೆ ಗೊತ್ತಾ? ಮಕ್ಕಳು ದೊಡ್ಡವರಾದಿಯಾಗಿ ಹೊಸ ಚಟಗಳ ದಾಸರಾದ ಎಲ್ಲರ ಡಿ.ಎನ್.ಎ. ರಚನೆಯಲ್ಲಿ ಏರುಪೇರಾಗುತ್ತಿದೆ. ಇದುವರೆಗಿನ ವೈದ್ಯಕೀಯ ವಿಜ್ಞಾನದಲ್ಲಿ ಇದು ಘಟಿಸಿರಲಿಲ್ಲ. ಇದು ನನಗೆ ಅಪಾರವಾದ ಆತಂಕ ಉಂಟು ಮಾಡಿದೆ.’

ನಾರಾಯಣ ತುಸು ತಡೆದು, ‘ಇದು ಅಸುರರ ತಂತ್ರ’ ಎಂದ.

‘ವಾಟ್....? ರಾಕ್ಷಸರೆ? ಯಾವ ಕಾಲದಾಗ ಇದ್ದೀರಿ ನಾರಾಯಣ!’

‘ವೇಟ್ ವತ್ಸ. ದೊಡ್ಡವರಾದಿಯಾಗಿ ಮಕ್ಕಳು ಇಂತಹ ಚಟಗಳಿಗೆ ದಾಸರಾಗುತ್ತಿರುವುದು ಅಸುರರ ತಂತ್ರವೇ. ದಶಕಗಳ ಹಿಂದೆ ತಪಸ್ಸು ಮಾಡಿದ ಅಸುರರು ಮಾನವಕುಲ